**ಓ.ಎಸ್. ನಂಬರ್ : 22/2020**
**ಡಿ .ಡಬ್ಲ್ಯೂ : 2**

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

ದಿನಾಂಕ : 16.04.2026

**ಪಾಟೀ ಸವಾಲು : ವಾದಿಯ ಪರವಾಗಿ ಶ್ರೀ ಹೆಚ್.ಎಸ್.ಪಿ ವಕೀಲರಿಂದ :**

ಈ ದಾವಾದ ವಾದಿ ಮತ್ತು ಪ್ರತಿವಾದಿಗಳು ನನಗೆ ಗೊತ್ತು. 1 ನೇ ಪ್ರತಿವಾದಿ, ವಾದಿ ಮತ್ತು ಪ್ರತಿವಾದಿ 2 ರಿಂದ 5 ರವರ ತಂದೆ ಅಂದರೆ ಸರಿ. ಈ ದಾವಾದ ಬಗ್ಗೆ ತಿಳಿದುಕೊಂಡಿದ್ದೀರಾ ಅಂದರೆ ಗೊತ್ತು ಎನ್ನುತ್ತಾರೆ. ಈ ದಾವಾದಲ್ಲಿ 2 ನೇ ಪ್ರತಿವಾದಿ ಮತ್ತು 4 ನೇ ಪ್ರತಿವಾದಿಗಳು, ಪ್ರತಿವಾದಿ 6 ರಿಂದ 17 ರವರನ್ನು ಪಕ್ಷಗಾರರಾಗಿ ಸೇರಿಸಿಲ್ಲ ಎಂದು ತನ್ನ ತಕರಾರಿನಲ್ಲಿ ಹೇಳಿರುತ್ತಾರೆ ಅಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಆನಂತರ ನಮ್ಮನ್ನು ಈ ದಾವಾದಲ್ಲಿ ಪಕ್ಷಗಾರರಾಗಿ ಮಾಡಲಾಗಿದೆ ಅಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. 2 ಮತ್ತು 4 ನೇ ಪ್ರತಿವಾದಿ ಈ ದಾವಾದಲ್ಲಿ ನೇಮಿಸಿಕೊಂಡಿರುವ ವಕೀಲರನ್ನೇ ನಾನು ಈ ದಾವಾದಲ್ಲಿ ವಕೀಲರನ್ನು ನೇಮಿಸಿಕೊಂಡಿದ್ದೇನೆ ಅಂದರೆ ಲಿಂಗಪ್ಪ ವಕೀಲರನ್ನು ನಾನು ನೇಮಿಸಿಕೊಂಡಿದ್ದು ಅವರ ವಕೀಲರು ಯಾರು ಎಂದು ನನಗೆ ಗೊತ್ತಿಲ್ಲ.

ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವ ವಿಚಾರಗಳು ಎಲ್ಲಾ ಗೊತ್ತಾ ಅಂದರೆ ನನಗೆ ಇಂಗ್ಲೀಷ್ ಓದಲು ಬರುವುದಿಲ್ಲ ಎನ್ನುತ್ತಾರೆ. ಅದರಲ್ಲಿ 2 ನೇ ಪ್ಯಾರಾದಲ್ಲಿ ವಾದಿ ನನ್ನನ್ನು ಈ ದಾವಾದಲ್ಲಿ ಅನಾವಶ್ಯಕವಾಗಿ

ಪಕ್ಷಗಾರರನ್ನಾಗಿ ಮಾಡಿದ್ದು ನನಗೂ ಈ ದಾವಾಗೂ ಸಂಬಂಧ ಇಲ್ಲ ಎಂದು ಹೇಳಿರುತ್ತೇನೆ ಅಂದರೆ ಸರಿ. ಈ ದಾವಾದಲ್ಲಿ ಯಾವ ಯಾವ ಆಸ್ತಿಗಳನ್ನು ಸೇರಿಸಲಾಗಿದೆ ಎಂಬುದರ ಬಗ್ಗೆ ಗೊತ್ತಾ ಅಂದರೆ ಗೊತ್ತು ಎನ್ನುತ್ತಾರೆ. ಸದರಿ ಆಸ್ತಿಗಳೆಲ್ಲ ದಿಃ 15-1-1996 ರಂದು ಒಂದು ನೋಂದಾಯಿತ ವಿಭಾಗ ಪತ್ರದ ಮೂಲಕ ವಾದಿಯ ತಂದೆಗೆ ಬಂದಿರುತ್ತದೆ ಅಂದರೆ ಆ ವಿಭಾಗ ಪತ್ರವನ್ನು ಮಾಡಿಕೊಳ್ಳುವಾಗ ನಾನು ಹೋಗಿರುವುದಿಲ್ಲ ಎನ್ನುತ್ತಾರೆ. ನನಗೂ ಈ ದಾವಾಗೂ ಯಾವುದೇ ಸಂಬಂಧ ಇಲ್ಲ, ನಾನು 2 ಮತ್ತು 4ನೇ ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆ: ಇರುವುದಿಲ್ಲ**

**ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ**
**ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.**

ಓ.ಹೇ.ಕೇ.ಸರಿ ಇದೆ

**ಸಹಿ/-**
**ಹಿರಿಯ ಸಿವಿಲ್ ನ್ಯಾಯಾಧೀಶರು**
***ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳು,***
***ಸೋಮವಾರಪೇಟೆ.***